ಪಿ.ಡಬ್ಲ್ಯೂ- 1

**ದಿನಾಂಕಃ 16-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಎಂ.ಬಿ.ಎನ್. ವಕೀಲರ ಪರವಾಗಿ ಶ್ರೀಮತಿ ಕೆ.ಎ.ಕೆ., ಅರ್ಜಿದಾರರ ಪರ ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು 1ನೇ ಅರ್ಜಿದಾರಳಿದ್ದು, ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಹಾಗೂ ಅದರಲ್ಲಿರುವ ಸಹಿಗಳು ನನ್ನವೇ ಆಗಿರುತ್ತವೆ.

ನನ್ನ ಅರ್ಜಿಗೆ ಪೂರಕವಾಗಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಹಾವೇರಿ ಟ್ರಾಫಿಕ್ ಪೋಲಿಸ ಠಾಣೆಯ ಅಪರಾಧ ಸಂಖ್ಯೆ: 39/2022 ರ ಪ್ರ.ವ. ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ-1** ಎಂದು, ಎರಡು ದೂರಿನ ನಕಲಗಳನ್ನು **ನಿಪಿ-2 ಮತ್ತು ನಿಪಿ-3** ಎಂದು, ಮಾಲತೇಶ ಸಾವಕ್ಕನವರವರ ಹೇಳಿಕೆಯ ನಕಲನ್ನು **ನಿಪಿ-4** ಎಂದು, ಸ್ಥಳ ಪಂಚನಾಮೆಯ ನಕಲನ್ನು **ನಿಪಿ-5** ಎಂದು, ಶವ ಪಂಚನಾಮೆಯ ನಕಲನ್ನು **ನಿಪಿ-6** ಎಂದು, ಐ.ಎಂ.ವಿ. ವರದಿಯ ನಕಲನ್ನು **ನಿಪಿ-7** ಎಂದು, ಶವ ಪರೀಕ್ಷಾ ವರದಿಯ ನಕಲನ್ನು **ನಿಪಿ-8** ಎಂದು, ಅಂತಿಮ ವರದಿಯ ನಕಲನ್ನು **ನಿಪಿ-9** ಎಂದು, ಮಲ್ಲೇಶ ಮಾಲತೇಶಪ್ಪ ಸಾವಕ್ಕನವರವರ ಮರಣ ಪ್ರಮಾಣ ಪತ್ರವನ್ನು **ನಿಪಿ-10** ಎಂದು, ಕವಿತಾ, ಲಲಿತವ್ವ, ಮಾಲತೇಶ ಮತ್ತು ಭಾರತಿ ಮಾಲತೇಶಪ್ಪ, ಸಂತೋಷ ಸಾವಕ್ಕನವರ ಮತ್ತು ಮಲ್ಲೇಶಪ್ಪ ಮಾಲತೇಶ ಸಾವಕ್ಕನವರ ಇವರುಗಳಿಗೆ ಸಂಬಂಧಿಸಿದ ಆಧಾರ ಕಾರ್ಡಗಳ ನೋಟರೈಸಡ್ ಪ್ರತಿಗಳನ್ನು ಹಾಜರುಪಡಿಸಿದ್ದು (ಸದ್ರಿ ಆಧಾರ ಕಾರ್ಡಗಳನ್ನು ಮೂಲ ಆಧಾರ ಕಾರ್ಡಗಳೊಂದಿಗೆ ತಾಳೆ ಮಾಡಿ ನೋಡಿ ಸರಿ ಇದೆ ಎಂದು ಕಂಡು ಬಂದಿದ್ದರಿಂದ ಮೂಲ ಆಧಾರ ಕಾರ್ಡಗಳನ್ನು ಹಿಂದಿರುಗಿಸಲಾಯಿತು) ಒಟ್ಟು 06 ಆಧಾರ ಕಾರ್ಡಗಳ ನೋಟರೈಸಡ ಪ್ರತಿಗಳನ್ನು ಕ್ರಮವಾಗಿ **ನಿಪಿ-11** ರಿಂದ **ನಿಪಿ-16** ಎಂದು, ಒಟ್ಟು 115 ಮೆಡಿಕಲ್ ಬಿಲ್‌ಗಳನ್ನು ಹಾಜರುಪಡಿಸಿದ್ದು ಅವುಗಳನ್ನು

ಒಟ್ಟಾಗಿ **ನಿಪಿ–17** ಎಂದು, ಒಟ್ಟು 103 prescription ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ **ನಿಪಿ–18** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಪಿ.ಎಸ್.ಹೆಚ್. 2 ನೇ ಎದುರುದಾರರ ಪರ ವಕೀಲರಿಂದಃ</u>**

**1.** ಮಲ್ಲೇಶಪ್ಪ ನನಗೆ ಗಂಡನಾಗಬೇಕು. ಆತನು ಅಪಘಾತದಲ್ಲಿ ಮೃತಪಟ್ಟಾಗ ಆತನಿಗೆ 29 ವರ್ಷ ವಯಸ್ಸಾಗಿತ್ತು. ಕೂಲಿ ಕೆಲಸ ಮಾಡುತ್ತಿದ್ದರು. ಅದರಿಂದ ತಿಂಗಳಿಗೆ ರೂ. 20,000/– ಬರುತ್ತಿತ್ತು. ಆ ಬಗ್ಗೆ ದಾಖಲೆ ಇಲ್ಲ. ಆತನು ಏನು ದುಡಿಯುತ್ತಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಅರ್ಜಿದಾರರು ನನ್ನ ನಾದಿನಿ, 5 ನೇ ಅರ್ಜಿದಾರರು ನನ್ನ ಮೈದುನ. ನಾನು ಮತ್ತು ಸದ್ರಿಯವರು ನನ್ನ ಗಂಡನ ಆದಾಯವನ್ನು ಅವಲಂಬಿತರಾಗಿರಲಿಲ್ಲ ಅವರು ಬೇರೆನೆ ವಾಸವಾಗಿದ್ದರು ಎಂದರೆ ಸರಿಯಲ್ಲ.

**2.** ಅಪಘಾತವು ಹೇಗೆ ಆಗಿರುತ್ತದೆ ಎಂದು ನಾನು ನೋಡಿಲ್ಲ. ಅಪಘಾತವಾದ ದಿನ ನನ್ನ ಗಂಡ ಟ್ರ್ಯಾಕ್ಟರನಲ್ಲಿ ಕುಳಿತುಕೊಂಡು ನಾಗನೂರನಿಂದ ಕೆರಿಮತ್ತಿಹಳ್ಳಿಗೆ ಬರುತ್ತಿದ್ದರು. ಕೆರಿಮತ್ತಿಹಳ್ಳಿಗೆ ಬರುವ ಸಲುವಾಗಿ ಮಾತ್ರ ಆತನು ಟ್ರ್ಯಾಕ್ಟರನಲ್ಲಿ ಕುಳಿತುಕೊಂಡು ಬರುತ್ತಿದ್ದ ಎಂದರೆ ಸರಿ. ಸದ್ರಿ ಟ್ರ್ಯಾಕ್ಟರನಲ್ಲಿ ಕುಳಿತುಕೊಂಡು ಬರಲು ನನ್ನ ಗಂಡ ಟ್ರ್ಯಾಕ್ಟರ ಚಾಲಕನಿಗೆ ಹಣ ಕೊಟ್ಟಿಲ್ಲ. ನನ್ನ ಗಂಡ ಅನಧೀಕೃತ ಪ್ರಯಾಣಿಕ ಎಂದು ಸದ್ರಿ ಟ್ರ್ಯಾಕ್ಟರನಲ್ಲಿ ಹೋಗುತ್ತಿದ್ದ ಎಂದರೆ ಸರಿ. ಲಾರಿ ಚಾಲಕ ಟ್ರ್ಯಾಕ್ಟರಗೆ ಡಿಕ್ಕಿಪಡಿಸಿರುತ್ತಾನೆ. ಆ ರೀತಿ ಡಿಕ್ಕಿಪಡಿಸಿದ್ದರಿಂದ ನನ್ನ ಗಂಡನ ತಲೆಗೆ ಪೆಟ್ಟಾಗಿರುತ್ತದೆ. ನಂತರ ಸರ್ಕಾರಿ ಆಸ್ಪತ್ರೆ ಹಾವೇರಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಿ ನಂತರ ಎಸ್.ಡಿ.ಎಂ. ಧಾರವಾಡ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆತನಿಗೆ ತೀವ್ರಸ್ವರೂಪದ ಗಾಯಗಳಾಗಿರಲಿಲ್ಲ ಆತನು ಯಾವುದೋ ಖಾಯಿಲೆಯಿಂದ ಬಳಲುತ್ತಿದ್ದ ಎಂದರೆ ಸರಿಯಲ್ಲ. ದಿನಾಂಕಃ 06–11–2022 ಕ್ಕೆ ಅಪಘಾತವಾಗಿದ್ದು, ದಿನಾಂಕಃ 26–12–2022 ರಂದು ಹಾವೇರಿಯ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾನೆ. 1 ರಿಂದ 5 ನೇ ಅರ್ಜಿದಾರರು ಮಲ್ಲೇಶಪ್ಪನ ವಾರಸುದಾರರು ಎಂದು ತೋರಿಸಲು ವಾರಸಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತೇನೆ. ಆ ರೀತಿ ದಾಖಲೆಯನ್ನು ನಾನು ಹಾಜರು ಮಾಡಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗೂಡ್ಸ ವಾಹನದ ಚಾಲಕನಿಗೆ ಪರ್ಮೀಟ ಮತ್ತು ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿ. ನನ್ನ ಗಂಡ ಪ್ರಯಾಣಿಸುತ್ತಿದ್ದ ಟ್ರ್ಯಾಕ್ಟರ ಚಾಲಕನಿಗೆ ಸಹ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿ. ಸದ್ರಿ ಟ್ರ್ಯಾಕ್ಟರ ಮತ್ತು ಟ್ರೇಲರಗೆ ಇನ್ಸೂರೆನ್ಸ ಇರಲಿಲ್ಲ

ಎಂದರೆ ಸರಿಯಲ್ಲ. ಸದ್ರಿ ಟ್ರ್ಯಾಕ್ಟರಗೆ ಇನ್ಸೂರೆನ್ಸ ಇಲ್ಲದಿದ್ದ ಕಾರಣ ನಾನು ಮತ್ತು ಇತರ ಅರ್ಜಿದಾರರು ಹಾಗೂ ಪೋಲಿಸರು ಸೇರಿಕೊಂಡು ಪರಿಹಾರ ಪಡೆಯುವ ಸಲುವಾಗಿ ಗೂಡ್ಸ ವಾಹನದ ಮೇಲೆ ಪ್ರಕರಣ ದಾಖಲು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಸದ್ರಿ ಟ್ರ್ಯಾಕ್ಟರ ಚಾಲಕನಿಗೆ ಟಿ.ಟಿ. ಯುನಿಟ್ ಲೈಸೆನ್ಸ ಇರಲಿಲ್ಲ ಎಂದರೆ ಸರಿಯಲ್ಲ. 1 ರಿಂದ 5 ನೇ ಅರ್ಜಿದಾರರು ಮೃತ ಮಲ್ಲೇಶಪ್ಪನ ಆದಾಯವನ್ನೇ ಅವಲಂಬಿತರಾಗಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಮಕ್ಕಳು ಇಲ್ಲ. ಗೂಡ್ಸ ವಾಹನ ಸಂಖ್ಯೆಕೆಎ-52/ಎ-9300 ಚಾಲಕನ ನಿರ್ಲಕ್ಷ್ಯತನದಿಂದ ಅಪಘಾತವಾಗಿರುತ್ತದೆ ಎಂದು ಹೇಳಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ಅನಧೀಕೃತ ಪ್ರಯಾಣಿಕನಾಗಿದ್ದರಿಂದ, ಅನಧೀಕೃತ ಪ್ರಯಾಣಿಕನಿಗೆ 2 ನೇ ಎದುರುದಾರರು ಕಂಪನಿಯು ಯಾವುದೇ ಪ್ರಿಮೀಯಮ್‌ನ್ನು ಪಡೆದಿರುವುದಿಲ್ಲ ಆದ್ದರಿಂದ ಪರಿಹಾರವನ್ನು ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.